# ಕನ್ನಡ ರಾಜ್ಯೋತ್ಸವದ ವರದಿ

ದಿ: 01–11–2020 ರ ಭಾನುವಾರದಂದು ರೂರಲ್ ಪದವಿ ಕಾಲೇಜಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮಕ್ಕೆ ಘನ ಸಂಸ್ಥೆಯ ಅಧ್ಯಕ್ಷರಾದಂತಹ ಶ್ರೀ.ಕೆ.ಬಿ ನಾಗರಾಜು ರವರು ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ರೂರಲ್ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಗೋವಿಂದಪ್ಪನವರು ಕನ್ನಡ ಸಾಹಿತ್ಯದ ವೈಚಾರಿಕತೆಯ ಜೊತೆಗೆ ಸಾಹಿತ್ಯದಿಂದ ಉಂಟಾಗುವ ಸಂಸ್ಕಾರವನ್ನು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾದಂತಹ ಡಾ.ವಿ.ಎನ್. ಮಂಜುನಾಥ್ ರವರು ವಿಶೇಷ ಉಪನ್ಯಾಸವನ್ನು ನೀಡುತ್ತಾ ಕನ್ನಡ ನಾಡು–ನುಡಿಗಾಗಿ ಪ್ರತಿಯೊಬ್ಬರು ದುಡಿದಾಗ ಮಾತ್ರ ಕನ್ನಡ ನಾಡಿನ ಉಳಿವು ಸಾಧ್ಯ ಅದಕ್ಕಾಗಿ ಧರ್ಮ–ಜಾತಿ ಮೀರಿ ಎಲ್ಲರೂ ಹೋರಾಡಬೇಕೆಂದು ಕರೆಯಿತ್ತರು. ಸಂಸ್ಥೆಯ ಕಾರ್ಯದರ್ಶಿಗಳಾದಂತಹ ಶ್ರೀ.ಸಿ ರಮೇಶ್ ರವರು ಕನ್ನಡ ಭಾಷೆಯನ್ನು ಆಂಗ್ಲಮಾಧ್ಯಮದ ಮಕ್ಕಳು ಕಲಿಯಲು ಕಷ್ಟಪಡುತ್ತಾರೆ. ಅವರು ಮಾತೃಭಾಷೆಗೆ ಬೆಲೆ ಕೊಡುವಂತಾಗಬೇಕೆಂದು ತಿಳಿಸಿದರು. ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದಂತಹ ಶ್ರೀ.ಕೆ.ಬಿ ನಾಗರಾಜು ರವರು ಕನ್ನಡ ನಾಡು ನುಡಿ ಕುರಿತಾದ ಹೋರಾಟಗಳನ್ನು ಸ್ಮರಿಸಿದರು. ಇತಿಹಾಸ ವಿಭಾಗದ ಸಹಾಯಕ ಪ್ರಧ್ಯಾಪಕರಾದ ಶ್ರೀ ವಿಜೇಂದ್ರ ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಕಛೇರಿ ಸಿಬ್ಬಂದಿಯಾದ ಶ್ರೀ ಸಿದ್ದರಾಜು ರವರು ವಂದಿಸಿದರು.

8/12/2020

PRINCIPAL
RURAL COLLEGE
KANAKAPURA - 562 117